ದಾವಣಗೆರೆಯ ಎ.ವಿ.ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿ, ಪ್ರಸ್ತುತ ನಿವೃತ್ತ ಜೀವನ ನಡೆಸುತ್ತಿರುವ ಅನುರಾಧ ಪಿ.ಎಂ. ಅವರದು ಸಮಾಜಮುಖಿ ವ್ಯಕ್ತಿತ್ವ. ಸ್ತ್ರೀಪರ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ರಂಗಭೂಮಿ ಅವರ ಮತ್ತೊಂದು ಹವ್ಯಾಸಿ ಕ್ಷೇತ್ರ. 'ಒಲೆಯೊಳಗಣ ಕಿಚ್ಚು' ಪ್ರಕಟಿತ ಕವನ ಸಂಕಲನ.

ಮುತ್ತ ಯಾವುದೇ ಪಿಕ್‌ನಿಕ್ ಸ್ಥಳಗಳಿಗೆ ಹೋದ್ರೂ ಈ ಮಜಾ ಸಿಕ್ತಿರಲ್ಲಿಲ್ಲ. ಬಟ್ಟೆ ತೊಳೆದು ಒಣಹಾಕಿ, ಬುತ್ತಿ ಗಂಟು ಬಿಚ್ಚಿ ತಿನ್ನಲು ಕೂರ್ತಿದ್ವಿ, ಕಟಕಲು ರೊಟ್ಟಿ, ಬದನೆಕಾಯಿ ಎಣ್ಣೆಗಾಯಿ, ಗಟ್ಟಿ ಮೊಸರಿನ ಬುತ್ತಿ, ಗುರೆಳ್ಳು ಚಟ್ನಿ, ಬೆಲ್ಲದ ಉಪ್ಪಿನಕಾಯಿ ನಿಧಾನವಾಗಿ ತಿಂದು ಮುಗಿಸುವ ಹೊತ್ತಿಗೆ ಬಟ್ಟೆಗಳು ಒಣಗಿರುತ್ತಿದ್ದವು, ನೀಟಾಗಿ ಮಡಚಿ ಮನೆಗೆ ತಂದು ಇಡೋದ್ರೊಳಗೆ ಸಂಜೆಯಾಗಿರುತ್ತಿತ್ತು. ಮತ್ತೆ ಬಿಸಿಯೂಟ ಗಡದ್ದಾಗಿ ಹೊಡೆದು ಮಲಗಿ ಬಿಡೋದು.

ಭಾನುವಾರ ಬಂತು ಅಂದ್ರೆ ಸಂತೆಯ ಸಂಭ್ರಮ ಹೇಳತೀರದು, ದೊಡ್ಡಪ್ಪ 5 ಪೈಸೆ ಕೊಡೋರು, ಮಲ್ಲಪ್ಪ ಮಾಮ 5 ಪೈಸೆ... ಶಿವಣ್ಣ ಮಾಮ 5 ಪೈಸೆ... ಒಟ್ಟು 15 ಪೈಸೆ ಹಿಡಿದು ಹೊರಟರೆ ಏಕ್ ದಿನ್‌ಕಾ ಸುಲ್ತಾನಾ... ರುಚಿಯಾದ ವಡೆ, ಬೆಂಡು ಬತ್ತಾಸು... ಬೊಂಬಾಯಿ ಮಿಠಾಯಿ... ಬಣ್ಣ ಬಣ್ಣದ ಶರಬತ್ತು... ಮನಸ್ಸಿನಲ್ಲಿಯೇ ಮೆಲ್ಲುತ್ತಾ ಸವಿಯುತ್ತಾ ಸಾಗಿದ ನನಗೆ ಬಚ್ಚಲ ಮನೆ ಬಾಗಿಲು ತೆರದ ಸದ್ದಿಗೇ ಎಚ್ಚರವಾದದ್ದು. ಶುಭ್ರವಾಗಿ ಮಿಂದು ಮಡಿಯುಟ್ಟು ಬಂದ ಪಾರೀನ ನೋಡಿ ಕೊಂಚ ಸಮಾಧಾನವಾಯಿತು. ಕಪ್ಪು ಕಾಯದ ಮಿಂಚು ಇನ್ನೂ ಮಾಸಿಲ್ಲ ಎನಿಸಿತು. 'ಬಾ ಕೂತ್ಕೊ' ಅಂದೆ ನಗುತ್ತಾ ಬಂದು ಕೂತಳು. ಯಾವುದಕ್ಕೂ ಪ್ರತಿರೋಧವಿಲ್ಲ, ಸಮಾಧಾನವಾಗಿಯೇ ಇದ್ದಾಳೆ, ರೋಷಾವೇಶ ಕೊಂಚವೂ ಇಲ್ಲ. ಪೂರಾ ಹುಚ್ಚಿಯಲ್ಲ ಇವಳು... ಆದ್ರೂ ಖಾತ್ರಿಯಿಲ್ಲ... ವಿಚಿತ್ರವಾಗಿ ನಗುತ್ತಾಳೆ. ಮನೆಯೊಳಕ್ಕೆ ಬರಲು ತಕರಾರು ಮಾಡದೆ ಒಪ್ಪಿಕೊಂಡಳಲ್ಲಾ... ಅದು ಹೇಗೆ? ನಾನ್ಯಾರು ಅಂತಾ ಗೊತ್ತಾಗಿರಬಹುದಾ... ಅದಕ್ಕೆ ಸುಮ್ಮನಿರಬಹುದು... ಮತ್ತೊಮ್ಮೆ ಕೇಳಿದೆ... 'ಪಾರಿ ನಾನ್ಯಾರು ಅಂತ ಗೊತ್ತಾಯ್ತಾ? ಪೆಚ್ಚಾಗಿ ನೋಡಿ ನಕ್ಕಳು... ನಾಟಕ ಆಡ್ತಿರಬಹುದಾ? ಇದ್ದರೂ ಇರಬಹುದು. ಸುತ್ತಲಿನ ಕ್ರೂರ ಜಗತ್ತಿಗೆ ಈ ಹುಚ್ಚಿ ವೇಷ ಸೂಕ್ತ ಅಂತ ಅನ್ನಿಸಿರಬಹುದು. ಪ್ರಾಯದ ಹೆಣ್ಣುಮಗಳು ಒಂಟಿಯಾಗಿ ಎಲ್ಲೆಂದರಲ್ಲಿ ಸಿಕ್ಕರೆ ಬಿಡುವ ಗಂಡು ಪ್ರಪಂಚವೆ ಇದು? ಹುಚ್ಚಿಯ ಪಟ್ಟ ಕಟ್ಟಿಕೊಂಡು ಕಲ್ಲೆತ್ತಿಕೊಂಡು ನಿಂತರೆ ಕ್ಷೇಮ ಎನಿಸಿರಬಹುದು, ಅಪಾಯವೆನಿಸಿದರೆ ಕೆರಳಿ ಕಾಳಿಯಾಗುತ್ತಾಳೇನೋ? ನನ್ನದೇ ವಿಶ್ಲೇಷಣೆ ಸಾಕು. ಇವಳನ್ನೇ ಕೇಳೋಣ, ಹೇಗೆ ಕೇಳೋದು? ಎಲ್ಲಿಂದ ಶುರು ಮಾಡೋದು? ನಾನು ಕೇಳಿದ ಪಾರಿ ಕಥೆಗೂ, ಇವಳ ಈಗಿನ ಪರಿಸ್ಥಿತಿಗೂ ತಾಳೆ ಹಾಕಿ ನೋಡಿದರೆ ನಮಗೆ ಗೊತ್ತಿರುವ ಕೆಲವು ವಿವರಗಳು ತಪ್ಪಿಲ್ಲ ಎನಿಸುತ್ತಿದೆ. ನಮ್ಮ ಹಿರಿಯರ ನಡವಳಿಕೆಗಳೂ ಹಾಗೇ ಇದ್ದವಲ್ಲ, ನ್ಯಾಯ ಒದಗಿಸಿ ಪಾರಿಯನ್ನ ಕಷ್ಟಗಳಿಂದ ಪಾರು ಮಾಡುವುದಕ್ಕಿಂತ ಸಮಸ್ಯೆಗಳಿಂದ ಬೇಗನೆ ಕೈ ತೊಳೆದುಕೊಳ್ಳುವುದೇ ಅವರಿಗೆ ಮುಖ್ಯವಾಗಿತ್ತೇನೊ. ಮತ್ತೆ ವರ್ಷಗಳ ಹಿಂದೆ ಜಾರಿತು ಮನಸ್ಸು. ಒಂದ್ಸಾರಿ ಹೀಗೆ ಬೇಸಿಗೆ ರಜಾಕ್ಕೆ ಅಂತಾ ಬಂದು ಎಂದಿನ ಹಾಗೆ ದೊಡ್ಡಪ್ಪನ ಮನೆಗೆ ಓಡಿ ಹೋದಾಗ, ಮುದ್ದು ಮುಖದ ಚಂದ್ರಮ್ಮ ದೊಡ್ಡಮ್ಮನ ನಗು ಬತ್ತಿ ಹೋಗಿತ್ತು. ಕರಿಮುಖದ ಪಾರಿಯ ಮಿಂಚಿನ ನಗು ಮಾಯವಾಗಿತ್ತು, ಹಳೆಯ ಸ್ವಾಗತ ಸಿಕ್ಕರೂ ಬೆಚ್ಚನೆಯ ಪ್ರೀತಿಯ ಕೊರತೆ ಎದ್ದು ಕಾಣುತ್ತಿತ್ತು. 'ಪಾರಿ ಎಲ್ಲಿ?' ಹಠಾತ್ತನೆ ಕೇಳಿದ ಪ್ರಶ್ನೆಗೆ ಹಾಗೇ ಬಂತು ದಿಢೀರ್ ಉತ್ತರ... 'ಅವರಮ್ಮನ ಮನೆಗೆ ಹೋಗಿದ್ದಾಳೆ' ಓಡಿ ಬಂದ ಖುಷಿ ಹಾಗೇ ಸರ್ರನೆ ಇಳಿದು ಹೋಯ್ತು. ಮಾವನ ಮನೆಗೆ ವಾಪಸು ಬಂದ್ರೆ ಇಲ್ಲೂ ವಾತಾವರಣ ಬದಲಾಗಿದೆ, ದೊಡ್ಡವರೆಲ್ಲಾ ಸೇರಿ ಭಾರಿ ಗುಪ್ತ ಸಭೆ ನಡೆಸ್ತಾ ಇದ್ದಾರೆ, ಹಳೆ ಮನೆಯಲ್ಲಿ ಕೊಂಚ ಹೆಚ್ಚೇ ಜನ ಸೇರಿದ್ದಾರೆ. ಎಲ್ಲರ ಮುಖಗಳ ಮೇಲೂ ಗಂಭೀರ ಛಾಯೆ, ಪಾರಿ ವಿಷಯದಲ್ಲೇ